OS No.90/2020

PW-2 ಚಂದ್ರಣ್ಣ

Date: 03.07.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀಮತಿ ಬಿ ಟಿ ಎಸ್ ವಕೀಲರಿಂದಃ**

1. ವಾದಿ ದಾವೆಯನ್ನು ಶಿವಣ್ಣ ರವರ ಹೆಂಡತಿ ಪಾರ್ವತಮ್ಮ ರವರ ವಿರುದ್ಧ ಹೂಡಿರುತ್ತಾರೆ. ಬೇರೆ ಪ್ರತಿವಾದಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿದೆ. ವಾದಿ ತಿಪ್ಪೇಸ್ವಾಮಿ ರವರ ತಂದೆಯ ಹೆಸರು ಹನುಮಣ್ಣ ಎಂದರೆ ಸರಿ. ಸದರಿ ಹನುಮಣ್ಣ ರವರ ಅಣ್ಣನ ಹೆಸರು ಸಿದ್ದಲಿಂಗಪ್ಪ ಎಂದರೆ ಸರಿ. ಸಿದ್ದಲಿಂಗಪ್ಪ ರವರ ಹೆಂಡತಿಯ ಹೆಸರು ಗಂಗಮ್ಮ ಎಂದರೆ ಸರಿ. ನನ್ನ ತಾಯಿಯ ಹೆಸರು ಸಿದ್ದರಾಮಕ್ಕ ಎಂದರೆ ಸರಿ. ಗಂಗಮ್ಮ ಮತ್ತು ಸಿದ್ದರಾಮಕ್ಕ ರವರು ಸ್ವಂತ ಅಕ್ಕ ತಂಗಿಯರು ಎಂದರೆ ಸರಿ. ಉಜ್ಜಿನಪ್ಪ ರವರಿಗೆ ಸೇರಿದ ಆಸ್ತಿಗಳು ಯಾವುವು ಎಂದು ನಾನು ಹೇಳಬಲ್ಲೆ. ಅವರಿಗೆ ಒಟ್ಟು ಮೂರು ಆಸ್ತಿಗಳು ಇದ್ದು ಅವುಗಳಲ್ಲಿ ಒಂದು ಆಸ್ತಿ 47 ಎಕರೆ, ಒಂದು ಆಸ್ತಿ ಸುಮಾರು 5 ಎಕರೆ ಮತ್ತು ಇನ್ನೊಂದು ಆಸ್ತಿ 7 ವರೆ ಎಕರೆ ಇವೆ. ಅವುಗಳಲ್ಲಿ ಎರಡು ಆಸ್ತಿಗಳನ್ನು ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ. ನನಗೆ ಅವುಗಳ ಸರ್ವೆ ನಂಬರ್ ಹೇಳಲು ಆಗುವುದಿಲ್ಲ.

2. 5 ಎಕರೆ ಜಮೀನಿಗೆ ಚಕ್ಕುಬಂದಿ ನಾನು ಹೇಳಬಲ್ಲೆ. ಉತ್ತರಕ್ಕೆ ಹಳ್ಳ, ದಕ್ಷಿಣಕ್ಕೆ ತಿಪ್ಪೇಸ್ವಾಮಿ ಮತ್ತು ಬೋರಣ್ಣ ರವರ ಜಮೀನು, ಪೂರ್ವಕ್ಕೆ ಸರ್ಕಾರದ ಸೇಂದಿ ಖರಾಬ, ಪಶ್ಚಿಮಕ್ಕೆ ಸಿದ್ದಪ್ಪ ಮತ್ತು ರೇವಣ್ಣ ರವರ ಜಮೀನು.

3. 7 ವರೆ ಎಕರೆ ಜಮೀನಿಗೆ ಚಕ್ಕುಬಂದಿ ಹೇಳಬಲ್ಲೆ. ಉತ್ತರಕ್ಕೆ ಜಟ್ಟೆಪ್ಪ ರವರ ಜಮೀನು, ದಕ್ಷಿಣಕ್ಕೆ ರುದ್ರಣ್ಣ ರವರ ಜಮೀನು, ಪೂರ್ವಕ್ಕೆ ತುಪ್ಪದಮ್ಮ ರವರ ಜಮೀನು, ಪಶ್ಚಿಮಕ್ಕೆ ರುದ್ರಣ್ಣ ರವರ ಜಮೀನು.

4. 47 ಎಕರೆ ಜಮೀನಿಗೆ ಚಕ್ಕುಬಂದಿ ಹೇಳಬಲ್ಲೆ. ಉತ್ತರಕ್ಕೆ ಹೊಟ್ಟೆಪ್ಪನಹಳ್ಳಿ ಗ್ರಾಮಕ್ಕೆ ಹೋಗುವ ದಾರಿ, ದಕ್ಷಿಣಕ್ಕೆ ಸರ್ವೆ ನಂಬರ್ 24, ಪೂರ್ವಕ್ಕೆ ಹೊಟ್ಟೆಪ್ಪನಹಳ್ಳಿ ಗ್ರಾಮಕ್ಕೆ ಹೋಗುವ ದಾರಿ ಮತ್ತು ಬಾಲಪ್ಪ ರವರ ಜಮೀನು, ಪಶ್ಚಿಮಕ್ಕೆ ಚಮಜ್ಜರ ಸಿದ್ದಪ್ಪ ರವರ ಜಮೀನು ಇದೆ.

5. ನನಗೆ ಸದರಿ ಜಮೀನುಗಳ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮೂರು ಸರ್ವೆ ನಂಬರ್ ನ ಜಮೀನು ಇದೆ. ಅವುಗಳ ಸನಂ.39, 67 ಮತ್ತು 68 ಇರುತ್ತದೆ. ಉಜ್ಜಿನಪ್ಪ ರವರ ಮಕ್ಕಳು ಸುಮಾರು 60 ರಿಂದ 65 ವರುಷಗಳ ಹಿಂದೆ ವಿಭಜನೆ ಮಾಡಿಕೊಂಡಿದ್ದರು. ಅವರು ಬಾಯಿ ಮಾತಿನಲ್ಲಿ ವಿಭಜನೆ ಮಾಡಿಕೊಂಡಿದ್ದರು. ಆ ಬಗ್ಗೆ ಯಾವುದೇ ದಾಖಲೆಯನ್ನು ಮಾಡಿಕೊಂಡಿರಲಿಲ್ಲ. 5 ಎಕರೆ ಜಮೀನು ಕೆಂಚಪ್ಪ ರವರಿಗೆ ಮತ್ತು 7 ವರೆ ಎಕರೆ ಸಿದ್ದಪ್ಪ ರವರಿಗೆ ಬಂದಿತ್ತು. 47 ಎಕರೆ ಜಮೀನಿನಲ್ಲಿ ಅವರುಗಳು ಹೆಚ್ಚು ಕಡಿಮೆ ಎರಡು ಭಾಗಗಳಲ್ಲಿ ವಿಭಜನೆ ಮಾಡಿಕೊಂಡಿದ್ದರು. ಯಾರಿಗೆ ಎಷ್ಟು ಎಕರೆ ಜಮೀನು ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಇಬ್ಬರು ಮಕ್ಕಳು ಮತ್ತು ಅವರ ತಂದೆ ಮೂರು ಭಾಗಗಳಲ್ಲಿ ಆಸ್ತಿಯನ್ನು ವಿಭಜನೆ ಮಾಡಿಕೊಂಡಿದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಉಜ್ಜಿನಪ್ಪ ರವರ ಮಗ ಕೆಂಚಪ್ಪ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಕೆಂಚಪ್ಪ ರವರ ಮೊದಲನೆ ಹೆಂಡತಿ ತಿಪ್ಪಮ್ಮ ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಗಂಡು ಮಕ್ಕಳು ಹೆಸರು ಮರುಳಪ್ಪ ಮತ್ತು ಸಿದ್ದಪ್ಪ. ಹೆಣ್ಣು ಮಕ್ಕಳು ರಾಮಕ್ಕ ಮತ್ತು ಕೆಂಚಮ್ಮ. ಕೆಂಚಪ್ಪ ರವರ ಎರಡನೇ ಹೆಂಡತಿ ಹೆಸರು ತಿಪ್ಪಜ್ಜಿ ಅಲಿಯಸ್ ತಿಪ್ಪಮ್ಮ ಎಂದರೆ ಸರಿ. ಅವರಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಮಗನ ಹೆಸರು ಶಿವಣ್ಣ ಹೆಣ್ಣು ಮಕ್ಕಳ ಹೆಸರು ಗುರುಸಿದ್ದಮ್ಮ ಮತ್ತು ಸಿದ್ದಲಿಂಗಮ್ಮ ಇರುತ್ತದೆ. ಕೆಂಚಪ್ಪ ರವರ ಮೊದಲನೆ ಹೆಂಡತಿಗೆ 4 ಜನ ಮಕ್ಕಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಾದಿಯ ತಾತ ಸಿದ್ದಪ್ಪ ಅವರು ಯಾವ ಯಾವ ಆಸ್ತಿಗಳನ್ನು ಮತ್ತು ಯಾರು ಯಾರು ಭಾಗ ಮಾಡಿಕೊಂಡಿದ್ದರು ಎಂದು ನಾನು ಹೇಳಬಲ್ಲೆ. ಅವರುಗಳು 7 ವರೆ ಎಕರೆ ಜಮೀನಿನಲ್ಲಿ 3 ಭಾಗ ಆಗಿತ್ತು. ಉಜ್ಜಿನಪ್ಪ, ದ್ಯಾಮಣ್ಣ ಮತ್ತು ಕೆಂಚಣ್ಣ ರವರು ಸದರಿ ಜಮೀನನ್ನು ಭಾಗ ಮಾಡಿಕೊಂಡಿದ್ದರು. ಯಾರು ಯಾರಿಗೆ ಎಷ್ಟು ಭಾಗ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸನಂ.25 ರಲ್ಲಿ ದ್ಯಾಮಣ್ಣ ಮತ್ತು ಕೆಂಚಣ್ಣ ರವರಿಗೆ ತಲಾ 8 ಎಕರೆ ಹನುಮಣ್ಣ ಮತ್ತು ಸಿದ್ದಣ್ಣ ರವರಿಗೆ ತಲಾ 4 ಎಕರೆ ಜಮೀನು ಬಂದಿತ್ತು. ಸಿದ್ದಪ್ಪ ರವರು ಬಾಯಿ ಮಾತಿನಲ್ಲಿ ವಿಭಜನೆ ಮಾಡಿಕೊಂಡು ತದನಂತರ ಪತ್ರವನ್ನು ಮಾಡಿಕೊಂಡಿರುತ್ತಾರೆ. ಪತ್ರ ಯಾವಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ.

8. ವಾದಿಯ ತಂದೆ ಹನುಮಣ್ಣ ರವರಿಗೆ ಬಂದಿದೆ ಎಂದು ಹೇಳಿದ 4 ಎಕರೆ ಜಮೀನಿನ ಚಕ್ಕುಬಂದಿ ನಾನು ಹೇಳಬಲ್ಲೆ. ಉತ್ತರಕ್ಕೆ ಹೊಟ್ಟೆಪ್ಪನಹಳ್ಳಿಗೆ ಹೋಗುವ ದಾರಿ, ದಕ್ಷಿಣಕ್ಕೆ ಕೆಂಚಪ್ಪ ರವರ ಭಾಗ, ಪೂರ್ವಕ್ಕೆ ಶ್ಯಾಮಜ್ಜ ಸಿದ್ದಪ್ಪ ರವರ ಜಮೀನು, ಪಶ್ಚಿಮಕ್ಕೆ ಸಿದ್ದಲಿಂಗಪ್ಪ ರವರ ಜಮೀನು ಇದೆ.

ಪಾಲುವಿಭಾಗ ದಲ್ಲಿ ವಾದಿಯ ತಂದೆ ಹನುಮಣ್ಣ ರವರ ಭಾಗಕ್ಕೆ 4 ಎಕರೆ ಜಮೀನು ಬಂದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಸನಂ.25 ರಲ್ಲಿ 8 ಎಕರೆ ಜಮೀನನ್ನು ಶಿವಣ್ಣ ರವರಿಗೆ ಕೆಂಚಣ್ಣ ರವರು ಮಾರಾಟ ಮಾಡಿರುತ್ತಾರೆ. ಕೆಂಚಣ್ಣ ರವರು 8 ಎಕರೆ ಜಮೀನನ್ನು ಶಿವಣ್ಣ ರವರಿಗೆ ಮಾರಾಟ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪ ಮತ್ತು ಆತನ ಮಕ್ಕಳು 8 ಎಕರೆ 6 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಪಾರ್ವತಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೊಟ್ಟೆ ಕೆಂಚಪ್ಪ ಬಿನ್ ಉಜ್ಜಿನಪ್ಪ ರವರ ಮಗ ಕೆಂಚಪ್ಪ ರವರು ಯಾವ ಯಾವ ಜಮೀನು ದಾನ ಮಾಡಿದ್ದಾರೆ ಎಂದು ಗೊತ್ತು. ಅವರು ಸನಂ.25 ರಲ್ಲಿ ಜಮೀನನ್ನು ಶಿವಣ್ಣ ರವರ ಮೊದಲನೆ ಹೆಂಡತಿ ಪಾರ್ವತಮ್ಮ ರವರಿಗೆ ಮಾಡಿರುತ್ತಾರೆ. ನನಗೆ ಅದರ ಅಳತೆ ಹೇಳಲಾಗುವುದಿಲ್ಲ. ಶಿವಣ್ಣ ರವರಿಗೆ ಒಬ್ಬರೆ ಹೆಂಡತಿ ಮತ್ತು ಅವರು ಪಾರ್ವತಮ್ಮ ಎಂದರೆ ಸರಿಯಲ್ಲ. ದಾನ ಕೊಟ್ಟ ಎಲ್ಲಾ ಆಸ್ತಿಗಳು 1 ನೇ ಪ್ರತಿವಾದಿ ಪಾರ್ವತಮ್ಮ ರವರ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ಜಮೀನಿನ ಖಾತೆ 1 ನೇ ಪ್ರತಿವಾದಿ ಹೆಸರಿನಲ್ಲಿದೆ ಮತ್ತು ಅವರ ಸ್ವಾಧೀನಲ್ಲಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಸನಂ.25 ರಲ್ಲಿರುವ ಜಮೀನಿನ ಬೇಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಈಗ ಹಾಲಿ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಸನಂದ.25 ರಲ್ಲಿ ಪ್ರಮೀಳಮ್ಮ ರವರು ಎಷ್ಟು ವಿಸ್ತೀರ್ಣದ ಜಮೀನಿನ ಸ್ವಾಧಿನದಲ್ಲಿ ಇದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಜಮೀನು 2 ನೇ ಪ್ರತಿವಾದಿ ಪ್ರಮೀಳಮ್ಮ ರವರಿಗೆ ಹೇಗೆ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸನಂ.25 ರಲ್ಲಿ 3 ನೇ ಪ್ರತಿವಾದಿಯ ಹೆಂಡತಿ ಶಾಂತವೀರಮ್ಮ ರವರು ಎಷ್ಟು ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಶಾಂತವೀರಮ್ಮ ರವರು 5 ಎಕರೆಯ ಮತ್ತು ಸಿದ್ದಪ್ಪ ರವರ ತಮ್ಮ ಮಂಜಣ್ಣ 4 ನೇ ಪ್ರತಿವಾದಿ 3 ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿದಿರುತ್ತಾರೆ. ಶಾಂತವೀರಮ್ಮ ರವರಿಗೆ ಜಮೀನು ಹೇಗೆ ಬಂದಿತ್ತು ಎಂದು ಕೇಳಿದ ಪ್ರಶ್ನೆಗೆ ಅವರು ಸದರಿ ಜಮೀನನ್ನು ಶಿವಣ್ಣ ರವರಿಂದ ಖರೀದಿ ಪಡೆದುಕೊಂಡಿದ್ದರು ಎಂದು ನುಡಿದಿರುತ್ತಾರೆ.

9. ಶಾಂತವೀರಮ್ಮ ರವರ 5 ಎಕರೆ ಜಮಿನಿನ ಚಕ್ಕುಬಂದಿ ನನಗೆ ಹೇಳಲಾಗುತ್ತದೆ. ಉತ್ತರಕ್ಕೆ ಬಸಣ್ಣ ರವರ ಜಮೀನು, ದಕ್ಷಿಣಕ್ಕೆ ಚಲುವಾದಿ ಶಿವಲಿಂಗಪ್ಪ ರವರ ಜಮೀನು, ಪೂರ್ವಕ್ಕೆ 4 ನೇ ಪ್ರತಿವಾದಿ ಮಂಜಣ್ಣ ರವರ ಜಮೀನು, ಪಶ್ಚಿಮಕ್ಕೆ ಶಿವಣ್ಣ ರವರ ಜಮೀನು ಇದೆ.

ಶಾಂತವೀರಮ್ಮ ಮತ್ತು ಮಂಜಣ್ಣ ರವರು ಕ್ರಮವಾಗಿ 5 ಎಕರೆ ಮತ್ತು 3 ಎಕರೆ ಜಮೀನನ್ನು ಶಿವಣ್ಣ ರವರ ಹೆಂಡತಿ ಪಾರ್ವತಮ್ಮ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಖರೀದಿ ಮಾಡಿರಬಹುದು ಆದರೆ ದಾನ ಪತ್ರ ಮಾಡಿಲ್ಲ ಎಂದು ನುಡಿದಿರುತ್ತಾರೆ.

10. ವಾದಿ ಮತ್ತು ಪ್ರತಿವಾದಿಗಳ ನಡುವೆ ಕಂದಾಯ ನ್ಯಾಯಾಲಯದಲ್ಲಿ ಯಾವ ಯಾವ ಪ್ರಕರಣಗಳು ನಡೆದಿವೆ ಎಂದು ನನಗೆ ಗೊತ್ತಿಲ್ಲ. ಸನಂ.25 ರಲ್ಲಿ ಆದಂತಹ ಎಲ್ಲಾ ಪೋಡುಗಳನ್ನು ಚಿತ್ರದುರ್ಗದ ಜಿಲ್ಲಾಧಿಕಾರಿಗಳು ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸನಂ.25 ರಲ್ಲಿ ನಾನು ಮೇಲೆ ಹೇಳಿದ ವ್ಯಕ್ತಿಗಳನ್ನು ಹೊರತುಪಡಿಸಿ ಬೇರೆ ಯಾರು ಯಾರು ಎಷ್ಟು ಎಕರೆ ಜಮೀನನ್ನು ಹೊಂದಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿಯನ್ನು ದೇವಗಿರಿ ಪಾರ್ವತಮ್ಮ ಎಂದು ಕರೆಯುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಣ್ಣ ರವರಿಗೆ ಮೊದಲಿಗೆ ನಮ್ಮ ಅತ್ತೆಯ ಮಗಳಾದ ಪಾರ್ವತಮ್ಮ ಯಾನೆ ಮದುರೆ ಪಾರ್ವತಮ್ಮ ಎಂಬುವವರನ್ನು ಕೊಟ್ಟು ಮದುವೆ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಕ್ಕ ರವರ ಮಗಳು ಪಾರ್ವತಮ್ಮ ರವರಿಗೂ ಮತ್ತು ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಾರ್ವತಮ್ಮ ರವರ ತಂದೆ ತಾಯಿಯೊಂದಿಗೆ ನನಗೆ ಸಂಬಂದ ಇದೆ ಎಂದು ನುಡಿದಿರುತ್ತಾರೆ. ಪಾರ್ವತಮ್ಮ ರವರ ತಾಯಿ ರಾಮಕ್ಕ ನನ್ನ ಅತ್ತೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರಾಮಕ್ಕ ರವರ ಮಗಳು ಪಾರ್ವತಮ್ಮ ರವರು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ಹೆರಿಗೆ ಕಾಲದಲ್ಲಿ ಮೃತಪಟ್ಟಿರುತ್ತಾರೆ. ಮಗು ಹುಟ್ಟಿದ ತಾರೀಖು ಮತ್ತು ತಿಂಗಳು ನನಗೆ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿಯೇ ಮೊದಲನೆ ಪಾರ್ವತಮ್ಮ ಆಗಿರುತ್ತಾರೆ ಮತ್ತು ನಾನು ರಾಮಕ್ಕ ರವರ ಮಗಳು ಪಾರ್ವತಮ್ಮ ರವರನ್ನು ಮದುರೆ ಪಾರ್ವತಮ್ಮ ಎಂದು ಕರೆಯುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಣ್ಣ ರವರಿಗೆ ಇಬ್ಬರು ಹೆಂಡತಿ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ಜಮೀನಿನ ಮಧ್ಯದಲ್ಲಿ ಪೂರ್ವ ಪಶ್ಚಿಮವಾಗಿ ದೊಡ್ಡ ಏರಿ ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡ ಏರಿ ಎಷ್ಟು ಅಗಲ ಮತ್ತು ಉದ್ದ ಇದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಏರಿ 5 ಅಡಿ ಎತ್ತರದಲ್ಲಿದೆ. ಏರಿ ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರ್ವತಮ್ಮ ರವರು ಏರಿಯ ದಕ್ಷಿಣ ದಿಕ್ಕಿನ ಜಮೀನಿನ ಸಾಗುವಳಿ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 6 ನೇ ಪ್ರತಿವಾದಿ ಪರ ವಕೀಲರಿಂದ ಏನು ಇಲ್ಲ**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ